ಬರೆದು ಸಂಘದಲ್ಲಿರುವ ಕುಟುಂಬಗಳ ಸಂಖ್ಯೆಯ ಬಗ್ಗೆ ಮಾಹಿತಿ ಒದಗಿಸಲು ಕೋರಿದ್ದರು. ಧಾರವಾಡ ಅವರು ದಿನಾಂಕ : 27-3-99ರಂದು ನೀಡಿದ ವರದಿಯಲ್ಲಿ 340 ಕುಟುಂಬಗಳಿರುತ್ತವೆಯೆಂದು ತಿಳಿಸಿರುತ್ತಾರೆ. ಇವರ ಶಿಫಾರಸ್ಸಿನ ಮೇರೆಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು 340 ಕುಟುಂಬಗಳಿಗೆ ಬಿದಿರು ಸರಬರಾಜು ಮಾಡಲು 31-5-99ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಪತ್ರ ಬರೆದು ಸೂಚಿಸಿರುತ್ತಾರೆ.

ಅ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ಇವರು 340 ಕುಟುಂಬಗಳಿಗೆ ಬೊಂಬು ನೀಡಲು ಸ್ಥಳ ಪರಿಶೀಲನೆ ಮಾಡಿದಾಗ ಅಷ್ಟು ಕುಟುಂಬಗಳು ಇಲ್ಲದೇ ಇರುವುದು ಕಂಡುಬಂದಿದ್ದರಿಂದ ಅವರ ಸಹಕಾರಿ ಸಂಘಗಳ ಸಂಯುಕ್ತ ನಿಬಂಧಕರು, ಬೆಳಗಾಂ ಇವರಿಗೆ ಖಚಿತ ಕುಟುಂಬಗಳ ಬಗ್ಗೆ ವರದಿ ನೀಡಲು ಕೋರಿರುತ್ತಾರೆ. ಅವರು ಸಹಕಾರ ಸಂಘಗಳ ಉಪ ನಿಬಂಧಕರು, ಇವರಿಗೆ ದಿನಾಂಕ : 31-5-99ರಂದು ಪತ್ರ ಬರೆದು ಕುಟುಂಬಗಳ ಯಾದಿಯನ್ನು ರೇಷನ್ ಕಾರ್ಡಿಗೆ ಒಂದೇ ಕುಟುಂಬ ಎಂದು ಪರಿಗಣಿಸಿ ಯಾದಿ ತಯಾರಿಸಿ ಧಾರವಾಡ ತುರ್ತಾಗಿ ಕಳುಹಿಸಲು ಸೂಚಿಸಿರುತ್ತಾರೆ. ಇದುವರೆವಿಗೂ ವರದಿ ಬಂದಿರುವುದಿಲ್ಲ. ವರದಿ ಬಂದ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೆಳದಿ ವಸ್ತು ಸಂಗ್ರಹಾಲಯದ ಅನುದಾನ.

1596(2271) ಶ್ರೀ ಕುಂಭೆ ಸುಂದರ್ ರಾವ್ (ಸುರತ್ಕಲ್) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಳದಿ ಮತ್ತು ಇತಿಹಾಸ ಸಂಶೋಧನಾ ಕೇಂದ್ರವನ್ನು ಪಾಯಂ ಆಗಿ ಅನುದಾನ ಸಂಹಿತೆಯಡಿಯಲ್ಲಿ ಸೇರಿಸುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ ಯಾವಾಗ ಸೇರಿಸಲಾಗುವುದು.

ಆ) ಕೆಳದಿಯ ಕೇಂದ್ರದ ಸಿಬ್ಬಂದಿ ವರ್ಗಕ್ಕೆ ಕಳೆದ 3 ತಿಂಗಳುಗಳಿಂದ ವೇತನ ನೀಡಲಾಗಿಲ್ಲವೆಂಬುದು ನಿಜವೇ ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ಯಾವಾಗ ವೇತನ ನೀಡಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು)

ಅ) ಹೌದು. ಕೆಳದಿ ವಸ್ತು ಸಂಗ್ರಹಾಲಯಕ್ಕೆ ಪ್ರಸಕ್ತ ಸಾಲಿಗೆ ರೂ. 4.50 ಲಕ್ಷಗಳ

ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಇದನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಸಂಸ್ಥೆಯನ್ನು ಶಾಶ್ವತ ಅನುದಾನ ಸಂಹಿತೆಗೆ ಒಳಪಡಿಸಲು ಸಹ ಸಾಧ್ಯವಾಗುವುದಿಲ್ಲ.

ಆ) ಕೆಳದಿಯ ಕೇಂದ್ರದ ಸಿಬ್ಬಂದಿ ವರ್ಗಕ್ಕೆ ಪ್ರಸಕ್ತ ಸಾಲಿನಲ್ಲಿ ಒದಗಿಸಲಾಗಿರುವ 4.50 ಲಕ್ಷ ರೂ.ಗಳಲ್ಲಿ, ದಿನಾಂಕ 4.6.999 ರಂದು 2.25 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಆದೇಶವನ್ನು ಹೊರಡಿಸಿದೆ.

ಇ) -ಮೇಲಿನಂತೆ-

ಜಿಲ್ಲಾ ರಂಗ ಮಂದಿರಗಳು.

1597(2273). ಶ್ರೀ ಕುಂಭೆ ಸುಂದರ್‌ರಾವ್ (ಸುರತ್ಕಲ್) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆಗೊಂದು ರಂಗಮಂದಿರ ಎಂಬ ಸರ್ಕಾರದ ಯೋಜನೆಯನ್ನು ಇನ್ನು ಜಾರಿಯಲ್ಲಿ ಇದೆಯೇ? ಹಾಗಿದ್ದಲ್ಲಿ, ಎಷ್ಟು ಜಿಲ್ಲೆಗಳಲ್ಲಿ ರಂಗಮಂದಿರ ನಿರ್ಮಾಣವಾಗಿದೆ.

ಆ) ಮಂಗಳೂರಿನಲ್ಲಿ ರಂಗಮಂದಿರ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಇದಕ್ಕೆ ಬೇಕಾದ ನಿಧಿ ಸಂಗ್ರಹ ಆಗಿದೆಯೇ? ಹಾಗಿದ್ದರೆ ನಿರ್ಮಾಣದ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಈ) ಶೀಘ್ರದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು) :—

ಅ) 1) ಇದೆ.

2) ತುಮಕೂರು, ಕೋಲಾರ, ಶಿವಮೊಗ್ಗ, ಬಳ್ಳಾರಿ, ರಾಯಚೂರು, ಕಾರವಾರ, ಹಾಸನ ಹಾಗೂ ಬೆಳಗಾವಿ.

ಆ) ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.